ಗುಲ್ಬರ್ಗ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಕೊರತೆ

೧೬೬ (೬೮೧) ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್ (ಅಫಜಲ್‌ಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಕೊರತೆ ಇರುವುದರಿ ಸರ್ಕಾರದವರಿಗೆ ಗೊತ್ತಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಗೊತ್ತಿದೆ.

ಆ) ೧) ಜಿಲ್ಲಾ ಆಯ್ಕೆ ಸಮಿತಿಯು ಪ್ರಾಥಮಿಕ ಶಿಕ್ಷಕರ ಖಾಲಿ ಹುದ್ದೆಗಳಿಗೆ ನೇಮಕಾತಿ ನಡೆಸಲು ಅಗತ್ಯ ಕ್ರಮ ತೆಗೆದುಕೊಂಡಿದೆ.

೨) ಗುಲ್ಬರ್ಗ ವಿಭಾಗದಲ್ಲಿ ಖಾಲಿಇರುವ ೧೪೮ ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ವಿಭಾಗೀಯ ನೇಮಕಾತಿ ಸಮಿತಿಯ ಮೂಲಕ ಕ್ರಮ ತೆಗೆದು ಕೊಂಡು ಈ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇಷ್ಟರಲ್ಲಿ ಈ ಹುದ್ದೆಗಳನ್ನು ಭರ್ತಿಮಾಡಲಾಗುವುದು.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್.—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 'ಗೊತ್ತಿದೆ' ಎಂಬುದಾಗಿ ಮಾನ್ಯ ಸಚಿವರು ಹೇಳಿದ್ದಾರೆ. ಎಷ್ಟು ಜನ ಶಿಕ್ಷಕರ ಕೊರತೆ ಇದೆ ಎಂಬುದರ ಮಾಹಿತಿಯನ್ನು ಕೊಡಬೇಕು. ನಾನು ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳಿರಬಹುದು ಬಗ್ಗೆಯೂ ವಿಚಾರಗಳನ್ನು ಕೇಳಿದ್ದೆ. ಆದರೆ ಮಾನ್ಯ ಮಂತ್ರಿಗಳು ಪ್ರೌಢಶಾಲೆಯ ಬಗ್ಗೆ ಮಾತ್ರ ಮಾಹಿತಿಯನ್ನು ಕೊಟ್ಟಿದ್ದಾರೆ. ಪ್ರಾಥಮಿಕ ಶಾಲೆಗಳಂತೂ ಇನ್ನತ್ತ ಹೇಳಲಾರದ ಸ್ಥಿತಿಯಲ್ಲಿವೆ. ಬೆಂಗಳೂರು ನಗರದಲ್ಲಿ ಬೇಸ್‌ಮೆಂಟ್ ಸರಿಯಾಗಿಲ್ಲದ ಗಂಗಾರಾಂ ಕಟ್ಟಡ ಯಾವ ರೀತಿ ಆಯಿತೋ ಅದೇ ಸ್ಥಿತಿಯಲ್ಲಿ ಇವತ್ತು ಪ್ರಾಥಮಿಕ ಶಾಲೆಗಳು ಇವೆ. ೧ ರಿಂದ ೪ನೇ ತರಗತಿಯವರೆಗೆ ಕೇವಲ ಒಬ್ಬನೇ ಶಿಕ್ಷಕನಿದ್ದು ಪಾಠವನ್ನು ಹೇಳಿಕೊಡುತ್ತಿರುವಂತಹದ್ದನ್ನು ಆಳಂದ್ ಹಾಗೂ ಅಫ್ಜಲ್‌ಪುರ ತಾಲ್ಲೂಕಿನಲ್ಲಿ ನಾವೇ ಕಣ್ಣಾರೆ ನೋಡಿದ್ದೇವೆ. ಖಾಲಿ ಇರತಕ್ಕ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರೆಂಬುದನ್ನು ಮಾನ್ಯ ಸಚಿವರು ಹೇಳಬೇಕು. ಮೊನ್ನೆ ತಾನೆ ಜಿಲ್ಲಾ ಪರಿಷತ್ತಿನವರು ಡಿ ಎಲ್.ಆರ್.ಪಿ. ರುಲ್ಲಿ ಮೆರಿಟ್ ಆಧಾರದ ಮೇಲೆ ಖಾಲಿ ಇರತಕ್ಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡದೆ ಕೇವಲ ಯಾರು ಹಣ ಕೊಡುತ್ತಾರೋ ಅಂತಹವರನ್ನೇ ಆಯ್ಕೆ ಮಾಡುತ್ತಿರುವುದನ್ನು ಅಲ್ಲಿನ ಕೆಲವಾರು ಅಭ್ಯರ್ಥಿಗಳು ನನ್ನ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡಿ ಅದರ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕು.

ಶ್ರೀ ಎಂ. ಚಂದ್ರಶೇಖರ್.—ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರತಕ್ಕ ಶಿಕ್ಷಕರ ಹುದ್ದೆಗಳು ೬೬೫. ಇದರಲ್ಲಿ ೨೨೦ ಜನ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಉಳಿದ ಹುದ್ದೆಗಳಲ್ಲಿ ಅರ್ಧದಷ್ಟು ಖಾಲಿ ಇವೆ. ಜಿಲ್ಲಾಪರಿಷತ್ತಿನವರು ಮಾಡಿದಂತಹ ಆಯ್ಕೆ ಸಮಿತಿಯ ಬಗ್ಗೆ ದೂರುಗಳನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಇನ್ನುಳಿದ ಅರ್ಧ ಹುದ್ದೆಗಳಲ್ಲಿ ಟಿ.ಸಿ.ಹೆಚ್. ಆದವರಿಗೆ ಹಾಗೂ ಪರೋಮಿತಿ ವಿಚಾರವಂತಹವರಿಗೆ ಅವಕಾಶ ಮಾಡಿಕೊಡಬೇಕೆಂಬುದಾಗಿ ಸರ್ಕಾರದ ಆದೇಶ ಇದೆ ಇಷ್ಟರಲ್ಲೇ ಆಯ್ಕೆ ಸಮಿತಿಯವರು ಅರ್ಜಿಗಳನ್ನು ಕರೆದು ಆ ಕೆಲಸವನ್ನು ಮುಗಿಸುತ್ತಾರೆ.

ಇನ್ನು ಪ್ರೌಢಶಾಲೆಗಳಲ್ಲಿ ಖಾಲಿ ಇರತಕ್ಕ ೧೪೮ ಹುದ್ದೆಗಳಿಗಾಗಿ ಈಗಾಗಲೇ ಆಯ್ಕೆ ಸಮಿತಿಯವರು ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ. ಅದರ ಪ್ರಕಟಣೆ ಕೂಡ ಆಗಿದೆ. ಭರ್ತಿ ಮಾಡುವ ಕಾರ್ಯವನ್ನೂ ಇಷ್ಟರಲ್ಲೇ ಮಾಡಲಾಗುವುದು. ಮಾನ್ಯ ಸದಸ್ಯರು ಗುಲ್ಬರ್ಗದ ಡಿ ಎಲ್.ಆರ್.ಪಿ. ಯಲ್ಲಿ ಹಣ ತೆಗೆದುಕೊಂಡು ನೇಮಕಾತಿ ಮಾಡಿದ್ದಾರೆಂಬುದರ ಬಗ್ಗೆ ದೂರು ಇದೆ ಎಂಬುದಾಗಿ

ಹೇಳುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಸದಸ್ಯರ ಹತ್ತಿರ ಏನಾದರೂ ಪುರಾವೆಗಳು ಇದ್ದು ಅದನ್ನು ನಮಗೆ ಕೊಟ್ಟರೆ ಅದರ ಬಗ್ಗೆ ತನಿಖೆ ಮಾಡಬಹುದೇ ಹೊರತಾಗಿ ಬೇರೆ ಮಾಹಿತಿ ನಮ್ಮಲ್ಲಿಲ್ಲ.

ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ನೇಮಕಾತಿ

೧೬೮೮ (೬೯೨) ಶ್ರೀ ಎನ್. ಹೆಚ್. ಗೌಡ (ಕುಮಟ). —ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ. —

ಅ) ಕರ್ನಾಟಕದಲ್ಲಿರುವ ಎಷ್ಟು ಪೂರ್ಣ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣ ಅಧ್ಯಾಪಕರಿದ್ದಾರೆ ?

ಆ) ಉಳಿದ ಶಾಲೆಗಳಿಗೂ ಆ ಶಿಕ್ಷಕರನ್ನು ನಿಯಮಿಸುವ ವಿಚಾರವೇನಾದರೂ ಸರ್ಕಾರಕ್ಕೆ ಇದೆಯೇ ?

ಇ) ಇದ್ದರೆ ಎಂದಿನಿಂದ ನಿಯಮಿಸಲು ಕ್ರಮ ಕೈಗೊಳ್ಳಲಾಗುವುದು ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಶಿಕ್ಷಣ ರಾಜ್ಯ ಮಂತ್ರಿಗಳು). —

ಅ) ೧೩೭೮.

ಆ) ೧ ರಿಂದ ೭ ತರಗತಿಗಳಿರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೬ ಜನ ಉಪಾಧ್ಯಾಯರಿದ್ದು ೭ನೇ ಉಪಾಧ್ಯಾಯರನ್ನು ನೇಮಿಸುವ ಅವಶ್ಯಕತೆ ಬಂದಾಗ ದೈಹಿಕ ಶಿಕ್ಷಣ ತರಬೇತಿ ಪಡೆದ ಅಧ್ಯಾಪಕರನ್ನು ನೇಮಿಸಬೇಕೆಂದು ನಿರ್ದೇಶನವಿದೆ. ಆ ಪ್ರಕಾರ ಸಂಬಂಧಿಸಿದ ಜಿಲ್ಲಾ ಪರಿಷತ್ತುಗಳು ಕ್ರಮ ಕೈಗೊಳ್ಳಬಹುದು.

ಇ) ಉದ್ಭವಿಸುವುದಿಲ್ಲ.

ಶ್ರೀ ಎನ್. ಹೆಚ್. ಗೌಡ. —ಕರ್ನಾಟಕ ರಾಜ್ಯದಲ್ಲಿ ಒಟ್ಟು ೧೩೭೮ ಪೂರ್ಣ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಕರು ಇದ್ದಾರೆಂದು ಉತ್ತರ ಕೊಟ್ಟಿರುವುದನ್ನು ನೋಡಿ ನನಗೆ ತುಂಬ ಆಶ್ಚರ್ಯವಾಗುತ್ತಿದೆ. ನಾನೊಂದು ಪ್ರಶ್ನೆಯನ್ನು ಮಾನ್ಯ ಸಚಿವೆಯವರಿಗೆ ಕೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಎಷ್ಟು ಪೂರ್ಣ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಕರು ಇದ್ದಾರೆ ಎಂಬುದನ್ನು ತಿಳಿಸಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್. —ರಾಜ್ಯದಲ್ಲಿ ಒಟ್ಟು ೧೨೩೪೧ ಪೂರ್ಣ ಪ್ರಮಾಣದ ಹಿರಿಯ ಪ್ರಾಥಮಿಕ ಶಾಲೆಗಳಿದ್ದು, ಅವುಗಳಲ್ಲಿ ೧೩೭೮ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಿಸಲಾಗಿದೆ. ಇನ್ನುಳಿದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಶಾರೀರಿಕ ಶಿಕ್ಷಕರನ್ನು ನೇಮಿಸುವ ವಿಚಾರ ಸರ್ಕಾರದ ಪರಿಶೀಲನಾ ಹಂತದಲ್ಲಿದೆ. ೧ ರಿಂದ ೭ನೇ ತರಗತಿಯವರೆಗೆ ಸಾಮಾನ್ಯವಾಗಿ ೬ ಶಿಕ್ಷಕರನ್ನು ನೇಮಿಸಲಾಗಿದೆ. ೭ನೇ ಉಪಾಧ್ಯಾಯರನ್ನು ನೇಮಿಸುವಾಗ ಕಡ್ಡಾಯವಾಗಿ ಸಿ.ಪಿ ಎಡ್. ಆದಂತಹವರನ್ನೇ ದೈಹಿಕ ಶಿಕ್ಷಕರನ್ನಾಗಿ ನೇಮಿಸಬೇಕೆಂಬುದಾಗಿ ಸರ್ಕಾರದಿಂದ ಜಿಲ್ಲಾ ಪರಿಷತ್ತುಗಳಿಗೆ ಆದೇಶ ಹೋಗಿದೆ.

ಶ್ರೀ ಎನ್. ಹೆಚ್. ಗೌಡ —ಕರ್ನಾಟಕ ರಾಜ್ಯದಲ್ಲಿ ೧೨ ಸಾವಿರಕ್ಕಿಂತ ಹೆಚ್ಚು ಪೂರ್ಣ ಪ್ರಾಥಮಿಕ ಶಾಲೆಗಳಿದ್ದು ಅವುಗಳಲ್ಲಿ ಕೇವಲ ೧೩೭೮ ಶಾಲೆಗಳಲ್ಲಿ ಮಾತ್ರ ಶಾರೀರಿಕ ಶಿಕ್ಷಕರು ಇರುವುದನ್ನು ನೋಡಿದರೆ ನಿಜವಾಗಿಯೂ ಇದು ಕಳವಳಕಾರಿಯಾದ ಸಂಗತಿ. ಏಕೆಂದರೆ ಎಲ್ಲ ಪೂರ್ಣ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಕರ ಅಗತ್ಯ ಇದೆ. ೭ನೇ ವಯಸ್ಸಿನಿಂದ ಮಕ್ಕಳು ಶಾಲೆಗೆ ಹೋಗುತ್ತಾರೆ. ೬ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಕಿರಿಯ ಪ್ರಾಥಮಿಕ ಶಾಲೆಗೆ ಹೋಗುತ್ತಾರೆ. ಹಿರಿಯ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳಿಗೆ ಹೆಚ್ಚು ವಯಸ್ಸು ಆಗಿರುತ್ತದೆ. ಆಂತಹ ಮಕ್ಕಳಿಗೆ ೫ನೇ ತರಗತಿಯಲ್ಲಾದರೂ ಶಾರೀರಕ ಶಿಕ್ಷಣವನ್ನು ಕೋಡದೆ ಹೋದರೆ ಬುದ್ಧಿ ಬೆಳವಣಿಗೆಯಾಗುವುದಿಲ್ಲ ಅವರ ಮನಸ್ಸಿನ ಬೆಳವಣಿಗೆಯಾಗುವುದಿಲ್ಲ. ಆದ್ದರಿಂದ ಆ ಮಕ್ಕಳಿಗೆ ಬುದ್ಧಿ ಮತ್ತು ಮನಸ್ಸಿನ ಬೆಳವಣಿಗೆಯಾಗಬೇಕಾದರೆ ಶಾರೀರಿಕ ಬೆಳವಣಿಗೆ ಚೆನ್ನಾಗಿ ಆಗಬೇಕು. ನನ್ನ ಎರಡನೇ ಪ್ರಶ್ನೆಗೆ